ಸಂ.ಜಿಪಂಅ/ಗ್ರಂಥಾಲಯ/E-39713/2023-24

ಜಿಲ್ಲಾ ಪಂಚಾಯತ ಕಾರ್ಯಾಲಯ
ಉತ್ತರ ಕನ್ನಡ,
ಕಾರವಾರ, ದಿನಾಂಕ: .08.2023

## ಪತ್ರಿಕಾ ಪ್ರಕಟಣೆ

ಉತ್ತರ ಕನ್ನಡ ಜಿಲ್ಲೆಯ ಈ ಕೆಳಕಂಡ ಹೆಸರಿನ ಮುಂದೆ ತೋರಿಸಿದ ಗ್ರಾಮ ಪಂಚಾಯತ ಗ್ರಂಥಾಲಯಗಳಲ್ಲಿ ಖಾಲಿ ಇರುವ ಗ್ರಾಮ ಪಂಚಾಯತ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರಗಳ ಮೇಲ್ವಚಾರಕರ ಹುದ್ದೆಗೆ ತಾತ್ಕಾಲಿಕವಾಗಿ ಮಾಸಿಕ ಗೌರವ ಸಂಭಾವನೆ ಆಧಾರದ ಮೇಲೆ, ಅರ್ಹ ಅಭ್ಯರ್ಥಿಗಳಿಂದ ಸ್ಪರ್ಧಾತ್ಮಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ನಮೂನೆಯನ್ನು ಆಯಾ ಗ್ರಾಮ ಪಂಚಾಯತಿ ಕಾರ್ಯಾಲಯದಲ್ಲಿ ಪಡೆದುಕೊಳ್ಳುವುದು ಹಾಗೂ ಭರ್ತಿ ಮಾಡಿದ ಅರ್ಜಿಗಳನ್ನು ಪಂಚಾಯತ ಅಭಿವೃದ್ಧಿ ಅಧಿಕಾರಿಗಳ ಕಛೇರಿಗೆ ಸಲ್ಲಿಸತಕ್ಕದ್ದು, ಕೊನೆಯ ದಿನಾಂಕ: 30.09.2023 ರಂದು ನಿಗದಿ ಪಡಿಸಲಾಗಿದೆ.

| ಕ್ರ ಸಂ | ಗ್ರಾಮ ಪಂಚಾಯತ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳ ಹೆಸರು & ತಾಲೂಕು | ಮೀಸಲಾತಿ ವರ್ಗ ಮತ್ತು ಬಿಂದು | ಸಮತಳ ಮೀಸಲಾತಿ |
|---|---|---|---|
| 1 | ಬೆಳಂಬಾರ, ತಾ: ಅಂಕೋಲಾ | ಪರಿಶಿಷ್ಟ ಜಾತಿ | ಇತರೆ |
| 2 | ತೋಡೂರು, ತಾ: ಕಾರವಾರ | ಸಾಮಾನ್ಯ ಅಭ್ಯರ್ಥಿ | ಮಹಿಳಾ ಅಭ್ಯರ್ಥಿ |
| 3 | ಹೊಟೆಗಾಳಿ, ತಾ: ಕಾರವಾರ | ಪರಿಶಿಷ್ಟ ಪಂಗಡ | ಗ್ರಾಮೀಣ ಅಭ್ಯರ್ಥಿ |
| 4 | ಉಳಗಾ, ತಾ: ಕಾರವಾರ | ಸಾಮಾನ್ಯ ಅಭ್ಯರ್ಥಿ | ಅಂಗವಿಕಲ ಅಭ್ಯರ್ಥಿ |
| 5 | ಸಾಲಕೋಡ, ತಾ: ಹೊನ್ನಾವರ | ಪ್ರವರ್ಗ-1 | ಮಹಿಳಾ ಅಭ್ಯರ್ಥಿ |
| 6 | ಜಗಲಪೇಟ, ತಾ: ಜೋಯಿಡಾ | ಸಾಮಾನ್ಯ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ |
| 7 | ಗಾಂಗೋಡಾ ತಾ: ಜೋಯಿಡಾ | ಪ್ರವರ್ಗII (A) | ಇತರೆ |
| 8 | ಕೋರ್ಲಕೈ (ಅಡುಕಟ್ಟಾ), ತಾ:ಸಿದ್ದಾಪುರ | ಸಾಮಾನ್ಯ ಅಭ್ಯರ್ಥಿ | ಮಹಿಳಾ ಅಭ್ಯರ್ಥಿ |
| 9 | ಮಂಕಿ ಬಿ (ಅನಂತವಾಡಿ), ತಾ:ಹೊನ್ನಾವರ | ಪರಿಶಿಷ್ಟ ಜಾತಿ | ಗ್ರಾಮೀಣ ಅಭ್ಯರ್ಥಿ |
| 10 | ಮಂಕಿ ಸಿ (ಚಿತ್ತಾರ), ತಾ:ಹೊನ್ನಾವರ | ಸಾಮಾನ್ಯ ಅಭ್ಯರ್ಥಿ | ಮಾಜಿ ಸೈನಿಕ |
| 11 | ಮಾಗೋಡ, ತಾ: ಹೊನ್ನಾವರ | ಪ್ರವರ್ಗII (B) | ಮಹಿಳಾ ಅಭ್ಯರ್ಥಿ |
| 12 | ಮಂಜಗುಣಿ, ತಾ:ಶಿರಸಿ | ಸಾಮಾನ್ಯ ಅಭ್ಯರ್ಥಿ | ಮಹಿಳಾ ಅಭ್ಯರ್ಥಿ |
| 13 | ಮೇಲಿನ ಓಣಿಕೇರಿ, ತಾ: ಶಿರಸಿ | ಪ್ರವರ್ಗII (A) | ಗ್ರಾಮೀಣ ಅಭ್ಯರ್ಥಿ |
| 14 | ಮೊದಲಗೇರಾ, ತಾ:ಹಳಿಯಾಳ | ಸಾಮಾನ್ಯ ಅಭ್ಯರ್ಥಿ | ಕ. ಮಾ. ಅಭ್ಯರ್ಥಿ |
| 15 | ನಾಗನೂರು, ತಾ: ಮುಂಡಗೋಡ | ಪರಿಶಿಷ್ಟ ಜಾತಿ | ಮಹಿಳಾ ಅಭ್ಯರ್ಥಿ |
| 16 | ಓಣಿಕೇರಿ, ತಾ: ಮುಂಡಗೋಡ | ಸಾಮಾನ್ಯ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ |
| 17 | ಸೊಪ್ಪಿನಹೊಸಳ್ಳಿ, ತಾ: ಕುಮಟಾ | ಪ್ರವರ್ಗIII (A) | ಯೋ.ಅ |
| 18 | ಸೋಂದಾ, ತಾ: ಶಿರಸಿ | ಪರಿಶಿಷ್ಟ ಪಂಗಡ | ಮಹಿಳಾ ಅಭ್ಯರ್ಥಿ |
| 19 | ತಟ್ಟಿಗೇರಿ, ತಾ: ಹಳಿಯಾಳ | ಪ್ರವರ್ಗIII (B) | ತೃ.ಲಿಂಗ |
| 20 | ತಂಡಾಗುಂಡಿ, ತಾ:ಸಿದ್ದಾಪುರ | ಸಾಮಾನ್ಯ ಅಭ್ಯರ್ಥಿ | ಮಾಜಿ ಸೈನಿಕರು |

1. ಅಭ್ಯರ್ಥಿಯು ದ್ವಿತೀಯ ಪದವಿ ಪೂರ್ವ ಪರೀಕ್ಷೆ (ಪಿಯುಸಿ) ಯಲ್ಲಿ ಉತ್ತೀರ್ಣರಾಗಿರಬೇಕು ಮತ್ತು ಸರ್ಟಿಫಿಕೇಷನ್ ಕೋರ್ಸ ಇನ್ ಲೈಬ್ರರಿ ಸೈನ್ಸ್ ನಲ್ಲಿ ಪ್ರಮಾಣ ಪತ್ರ ಪಡೆದಿರತಕ್ಕದ್ದು ಹಾಗೂ ಮಾನ್ಯತೆ ಪಡೆದ ಸಂಸ್ಥೆಯಿಂದ ಕನಿಷ್ಟ ಮೂರು ತಿಂಗಳ ಕಂಪ್ಯೂಟರ್ ಕೋರ್ಸನಲ್ಲಿ ಉತ್ತೀರ್ಣರಾಗಿರಬೇಕು.
2. ಅಭ್ಯರ್ಥಿಯು ಗ್ರಾಮ ಪಂಚಾಯತ ವ್ಯಾಪ್ತಿಯ ನಿವಾಸಿಯಾಗಿರತಕ್ಕದ್ದು. ಸ್ಥಳೀಯ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಬಗ್ಗೆ ಸಂಬಂಧಪಟ್ಟ ರಹವಾಸಿ ಪ್ರಮಾಣ ಪತ್ರವನ್ನು ತಹಶೀಲ್ದಾರ ರವರಿಂದ ಪಡೆದು ಲಗತ್ತಿಸಿರಬೇಕು.
3. ನಿಗದಿಪಡಿಸಲಾದ ಮೀಸಲಾತಿಗೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರ ನೀಡಿದ ದೃಢೀಕರಣ ಪತ್ರ.
4. ಭರ್ತಿ ಮಾಡಿದ ಅರ್ಜಿಗಳನ್ನು ಎಸ್.ಎಸ್.ಎಲ್.ಸಿ. ಅಂಕಪಟ್ಟಿ, ಪಿಯುಸಿ ಅಂಕಪಟ್ಟಿ, ವರ್ಗಾವಣೆ ಪ್ರಮಾಣ ಪತ್ರ, ಮೀಸಲಾತಿ ಪ್ರಮಾಣ ಪತ್ರ, ಅಂಗವಿಕಲತೆ (ಇದ್ದಲ್ಲಿ) ದೃಢೀಕರಣ ಪತ್ರ ಹಾಗೂ ಇನ್ನಿತರ ವಿದ್ಯಾರ್ಹತೆ (ಇದ್ದಲ್ಲಿ) ದಾಖಲೆ ಸಲ್ಲಿಸುವದು.
5. ವಯೋಮಿತಿ

| | |
|---|---|
| ಕನಿಷ್ಠ | 18 ವರ್ಷಗಳು |
| ಸಾಮಾನ್ಯ ಅರ್ಹತೆಯ ಅಭ್ಯರ್ಥಿಗಳಿಗೆ | 35 ವರ್ಷಗಳು |
| ಪ್ರವರ್ಗ 2ಎ/2ಬಿ/3ಎ/3ಬಿ ಅಭ್ಯರ್ಥಿಗಳಿಗೆ | 38 ವರ್ಷಗಳು |
| ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ-1 ಅಭ್ಯರ್ಥಿಗಳಿಗೆ | 40 ವರ್ಷಗಳು |

ಮೇಲ್ಕಂಡ ಗರಿಷ್ಠ ವಯೋಮಿತಿಯು ಅಲ್ಲದೇ ವಿಧವೆಯರು, ಮಾಜಿ ಸೈನಿಕರು ಮುಂತಾದ ವರ್ಗದವರಿಗೆ ಸರ್ಕಾರವು ಕಾಲ ಕಾಲಕ್ಕೆ ನಿಗದಿಪಡಿಸುವ ಗರಿಷ್ಠ ವಯೋಮಿತಿಯನ್ನು ಕಲ್ಪಿಸುವುದು.

6. ಆಯ್ಕೆ ವಿಧಾನ : ಸರ್ಕಾರಿ ಆದೇಶ ದಿನಾಂಕ : 14.11.2022 ರ ನಿಯಮ 13 ಮತ್ತು 14 ರನ್ವಯ ಆಯ್ಕೆ ಮಾಡಲಾಗುವುದು.
7. ಅರ್ಜಿ ನಮೂನೆಗಳು ಆಯಾ ಗ್ರಾಮ ಪಂಚಾಯತ ಕಛೇರಿಯಲ್ಲಿ ದೊರೆಯುತ್ತವೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಗೆ ಸಂಪರ್ಕಿಸುವದು.
8. ಗ್ರಾಮ ಪಂಚಾಯತ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರವಾದ ಬೆಳಂಬಾರ ಗ್ರಾಮದಲ್ಲಿ ಪರಿಶಿಷ್ಟ ಜಾತಿ ಕುಟುಂಬಗಳು ಯಾರು ಇಲ್ಲವಾದ್ದಲ್ಲಿ ಸರ್ಕಾರದ ಆದೇಶ ದಿ: 14.11.2022 ರಲ್ಲಿ ಅದೇ ತಾಲೂಕಿನ ಬೇರೆ ಗ್ರಾಮ ಪಂಚಾಯತ ವ್ಯಾಪ್ತಿಯ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಅವಕಾಶ ಕಲ್ಪಿಸಲಾಗಿದೆ. (ಕೇವಲ ಅಂಕೋಲಾ ತಾಲೂಕಿನವರಿಗೆ ಮಾತ್ರ ಸೀಮಿತವಾಗಿದೆ)

ಉಪ ಕಾರ್ಯದರ್ಶಿ(ಆಡಳಿತ)
ಜಿಲ್ಲಾ ಪಂಚಾಯತ ಉತ್ತರ ಕನ್ನಡ, ಕಾರವಾರ
ಹಾಗೂ ಸದಸ್ಯ ಕಾರ್ಯದರ್ಶಿ, ಗ್ರಾ.ಪಂ. ಗ್ರಂಥಾಲಯ
ಹಾಗೂ ಮಾಹಿತಿ ಕೇಂದ್ರ ಮೇಲ್ವಿಚಾರಕರ ನೇಮಕಾತಿ ಸಮಿತಿ.